1-30 P.M.

Regularisrtion of Services of Medical Graduates

652. SRI B. PUTTASWAMIAH(Ramanagaram) —Will the Minister for Health be pleased to stare.—

(*a*) whether it has come to the notice of the Government that in the recent selection of the Medical Gradua'es by the Public Service Commission many local candidates working already have not been selected.

(*b*) if so, the steps Government propose to take to regularise the local candidates already working in several hospitals of the State and who have put in number of years of service?

SRI H. SIDDAVEERAPPA (Minister for Health).—

(*a*) Yes

(*b*) There is no provision in the rules to regularise the services of Local candidates as their services are purely temporary.

ಶ್ರೀ ಬಿ. ಪುಟ್ಟಸ್ವಾಮಯ್ಯ :—ತಾತ್ಕಾಲಿಕವಾಗಿ ಸ್ಥಳೀಯ ಅಭ್ಯರ್ಥಿಗಳಾಗಿ ಸೇವೆ ಮಾಡಿದ ಡಾಕ್ಟರುಗಳು ೨ ವರ್ಷಗಳಿಂದ ೧೦ ವರ್ಷಗಳವರೆಗೆ ತಾತ್ಕಾಲಿಕವಾಗಿ ಸೇವೆ ಮಾಡಿದ್ದಾರೆ, ಮುಂದೆ ಸರ್ಕಾರಿ ಉದ್ಯೋಗಕ್ಕೆ ಹೋಗುವುದಕ್ಕೆ ವಯೋಮಿತಿ ಮೀರಿರುತ್ತದೆ. ಇತ್ತೀಚೆಗೆ ಪಬ್ಲಿಕ್ ಸರ್ವೀಸ್ ಕಮೀಷನ್ ಮಾಡಿರತಕ್ಕ ಲಿಸ್ಟ್‌ನಲ್ಲಿ ಬಿಟ್ಟು ಹೋಗಿರತಕ್ಕ ನತದೃಷ್ಟ ವೈದ್ಯಾಧಿಕಾರಿಗಳ ಬಗ್ಗೆ ಸರ್ಕಾರ ಏನಾದರೂ ನಿರ್ಣಯಕ್ಕೆ ಬಂದು ಸಹಾಯ ಮಾಡುತ್ತದೆಯೆ?

† ಶ್ರೀ ಹೆಚ್. ಸಿದ್ದವೀರಪ್ಪ ;—ಅವರಿಗೆ ಸಹಾಯ ಮಾಡಬೇಕೆಂದು ರೂಲ್ ಅಮೆಂಡ್ ಮಾಡಿದ್ದೇವೆ. ಯಾರು ಬಹಳ ವರ್ಷಗಳಿಂದ ಇದ್ದಾರೆ ಅವರಿಗೆ ವಯೋ ಪರಿಮಿತಿ ಪರಿಗಣಿಸಿದ ರೀತಿ ಇಂಟರ್‌ವ್ಯೂ ಕೊಡಬೇಕೆಂದು ಮಾಡಿದ್ದಾರೆ. ಆದರಲ್ಲಿ ಕೆಲವರನ್ನು ತೆಗೆದುಕೊಂಡಿದ್ದಾರೆ ಕೆಲವರನ್ನು ಬಿಟ್ಟಿದ್ದಾರೆ. ನಾನು ಅವರಿಗೆ ಅನುಕಂಪ ವ್ಯಕ್ತಪಡಿಸುತ್ತೇನೆ. ಅವರಿಗೆ ಪಬ್ಲಿಕ್ ಸರ್ವಿಸ್ ಕಮೀಷನ್ನಿನ ಮುಂದೆ ಹೋಗುವುದಕ್ಕೆ ಒಂದು ಅವಕಾಶ ಕೊಟ್ಟಿವು, ಆದ್ರೆ ಅವರ ಅದೃಷ್ಟ ಕುಲಾಯಿಸಲಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ ;—ಅಧ್ಯಕ್ಷರೇ ತಮಗೆ ನಮಗೆ ಗೊತ್ತಿರುವ ಹಾಗೆ ಇತ್ತೀಚಿನ ಕೆಲವು ಆಯ್ಕೆಗಳಲ್ಲಿ ಕೆಲವು ಆಪಶಬ್ದಗಳು ಬಂದಿವೆ ಅವುಗಳನ್ನು ಬಿಚ್ಚು ಮನಸ್ಸಿನಿಂದ ಪುನಾಪಮಾಡ ಬೇಕಾದುದು ಅವಶ್ಯಕ. ಆದರಲ್ಲಿ ಬೇಡಿಕೆ ಪೂರೈಸುವುದಕ್ಕೆ ಶಕ್ತಿಯಿಲ್ಲದವರನ್ನು ಕೈಬಿಟ್ಟಿದ್ದಾರೆ. ಇಂಥ ಪರಿಸ್ಥಿತಿಯನ್ನು ಮನಗಂಡು ಸರ್ಕಾರ ಉದಾರತೆಯಿಂದ ಕರುಣೆಯಿಂದ ಅಂಥ ಅಭ್ಯರ್ಥಿಗಳ ಬಗ್ಗೆ ಮತ್ತೊಮ್ಮೆ ಪುನರ್ವಿಮರ್ಶೆ ಮಾಡಿ ಸಹಾಯ ಮಾಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ನಾನು ಏನು ಮಾಡಲಿ? ಆ ರೀತಿ ಮಾಡಲು ನನಗೆ ರೂಲ್ಸ್ ಇಲ್ಲ, ಯಾವ ರೀತಿ ಮಾಡಲಿ? ದಾರಿ ತೋರಿಸಿ.

ಶ್ರೀ ಕಾಗೋಡು ತಿಮ್ಮಪ್ಪ.—ರೂಲ್ಸ್ ಮಾಡಬೇಕಾದರೆ ದೇವೇಂದ್ರು ಬರಬೇಕೆ? ಸರ್ಕಾರದವರು ರೂಲ್ಸ್ ಮಾಡುವುದಕ್ಕೆ ಇರುವುದು.

ಶ್ರೀ ಎಚ್. ಸಿದ್ದವೀರಪ್ಪ.—ಅವರಿಗೆ ಅನುಕೂಲವಾಗಲಿ ಎಂದು ವಯಸ್ಸಿನ ಪರಿಮಿತಿಯನ್ನು ತೆಗೆದು ಹಾಕಿ ಪಬ್ಲಿಕ್ ಸರ್ವೀಸ್ ಕಮಿಷನ್ ಮುಂದೆ ಹೋಗಲಿಕ್ಕೆ ಅವಕಾಶ ಮಾಡಿಕೊಟ್ಟಿವು.

ಶ್ರೀ ಎಚ್. ಟಿ. ಕೃಷ್ಣಪ್ಪ.—ವಿಶ್ವವಿದ್ಯಾನಿಲಯದವರು ಅವರು ವೈದ್ಯಾಧಿಕಾರಿಗಳಾಗಿ ಕೆಲಸ ಮಾಡುವುದಕ್ಕೆ ಅರ್ಹತೆ ಎಂ.ಬಿ.ಬಿ.ಎಸ್. ಡಿಗ್ರಿ ಕೊಟ್ಟಿದ್ದಾರೆ. ಅದನ್ನು ಕೊಟ್ಟ ನಂತರ ಕೇವಲ ಅಸಿಸ್ಟೆಂಟ್ ಸರ್ಜನ್ ಪೋಸ್ಟಿಗೆ ಲೋಕಸೇವಾ ಆಯೋಗ ಮತ್ತೆ ಪರೀಕ್ಷೆ ಮಾಡುವ ಅವಶ್ಯಕತೆ ಕಾಣುವುದಿಲ್ಲ ತಮಿಳುನಾಡಿನಲ್ಲಿ first come first served ತತ್ವದ ಮೇಲೆ ಅಸಿಸ್ಟೆಂಟ್ ಸರ್ಜನ್‌ಗಳನ್ನು ನೇಮಕ ಮಾಡುತ್ತಾರೆ ಅವರಿಗೆ ವಿಶೇಷ ಪರಿಣತೆ ತಜ್ಞತೆ ಬೇಕಾಗುವುದಿಲ್ಲ. ಲೋಕಸೇವಾ ಆಯೋಗದವರು ಅವರನ್ನು ಪರೀಕ್ಷೆ ಮಾಡುತ್ತಾ ಇಲ್ಲ. ತಾವು ಏಕೆ ಆ ತತ್ವವನ್ನು ಅನುಸರಿಸಿ ಆದೇ ಪದ್ಧತಿಯನ್ನು ಇಲ್ಲಿ ಫಾಲೋ ಮಾಡಬಾರದು?

ಶ್ರೀ ಎಚ್. ಸಿದ್ದವೀರಪ್ಪ.—ವಿಚಾರ ಮಾಡುತ್ತೇನೆ, ಯೋಚಿಸುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಈ ನತದೃಷ್ಟರ ಬಗ್ಗೆ ಅನುಕಂಪ ಇದೆ ಎಂದು ಮಂತ್ರಿಗಳು ಹೇಳಿದರು. ಅವರು ಹಣ ಇಲ್ಲದೆ ನತದೃಷ್ಟರಾಗಿದ್ದಾರೆ. ಅವರಿಗೆ ಎಪಿಸಿಯನ್ಸಿ ಇದೆ. ಸರ್ಕಾರ ಅವರಿಗೆ ಆಗಿರತಕ್ಕ ಅನ್ಯಾಯವನ್ನು ಹೋಗಲಾಡಿಸಿ ಅವರಿಗೆ ಅನುಕೂಲವಾಗುವ ಹಾಗೆ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಹೇಗೆ ಮಾಡಬೇಕೆಂದು ನನಗೆ ಗೊತ್ತಾಗುವುದಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಲೋಕಲ್ ಕ್ಯಾಂಡಿಡೇಟ್ಸ್‌ನ್ನು ರೆಗ್ಯೂಲರೈಸ್ ಮಾಡಬೇಕೇ ಬೇಡವೇ ಎನ್ನುವ ಪ್ರಶ್ನೆ ಬಂದಾಗ ಅವರನ್ನು ಪೂರಾ ರೆಗ್ಯುಲರೈಸ್ ಮಾಡತಕ್ಕದ್ದಾ ಸರಿಯಲ್ಲ, ಪಬ್ಲಿಕ್ ಸರ್ವಿಸ್ ಕಮಿಷನ್ ಇದೆ, ಅವರ ಮುಂದೆ ಹೋಗಲಿ ಎಂದು ನಿರ್ಧಾರಕ್ಕೆ ಬಂದೆವು ಇವರು ಅವರ ಮುಂದೆ ಹೋಗಲಿಕ್ಕೆ ವಯಸ್ಸಿನ ಲಿಮಿಟ್ ಮೀರಿದೆ. ಆದುದರಿಂದ ಎಷ್ಟೇ ವಯಸ್ಸು ಆಗಿರಲಿ ಅವರಿಗೆ ಅವಕಾಶ ಕೊಡಬೇಕು ಎಂದು ರೂಲ್ ಅಮೆಂಡ್ ಮಾಡಿ ಪಬ್ಲಿಕ್ ಸರ್ವಿಸ್ ಕಮೀಷನ್‌ನ ಮುಂದೆ ಹೋಗಲಿಕ್ಕೆ ಅವಕಾಶ ಕೊಟ್ಟೆವು ಆದರಲ್ಲಿ ಕೆಲವರನ್ನು ಸೆಲೆಕ್ಟ್ ಮಾಡಿಕೊಂಡಿದ್ದಾರೆ, ಕೆಲವರನ್ನು ಬಿಟ್ಟಿದ್ದಾರೆ ಅವರ ದೃಷ್ಟಿಯಲ್ಲಿ ಕೆಲವರು ಸೆಲೆಕ್ಷನ್‌ಗೆ ಅರ್ಹತೆ ಉಳ್ಳವರು ಎಂದು ಯೋಚನೆ ಮಾಡಿ ಮಾಡಿದ್ದಾರೆಂದು ನಾನು ತಿಳಿದಿದ್ದೇನೆ. ಇನ್ನು ಕೆಲವರನ್ನು ಬಿಟ್ಟಿದ್ದಾರೆ ಅವರ ವಿಚಾರದಲ್ಲಿ ಪಶ್ಚಾತ್ತಾಪ ವ್ಯಕ್ತಪಡಿಸಬೇಕಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಹಿಂದೆ ಈ ಸದನದಲ್ಲಿ ಈ ಪ್ರಶ್ನೆ ಬಂದಾಗ ಮಾನ್ಯ ಸಿದ್ದವೀರಪ್ಪನವರು ಹೇಳಿದ್ದರು; ಸಾಧ್ಯವಾದಮಟ್ಟಿಗೂ ಎಲ್ಲರನ್ನೂ ಕೂಡ ಆಯ್ಕೆ ಮಾಡುವ ಪ್ರಯತ್ನ ಮಾಡುತ್ತೇವೆ ಎಂದು ಆದುದರಿಂದ ಮೊದಲನೆ ಪ್ರಾಶಸ್ತ್ಯವನ್ನು ಸ್ಥಳೀಯ ಅಭ್ಯರ್ಥಿಗಳಿಗೆ ಕೊಡುತ್ತಾರೆಂದು ನಾವು ನಂಬಿಕೊಂಡಿದ್ದೆವು. ಆದರೆ ಆ ರೀತಿ ಆಗಲಿಲ್ಲ ಪಿಎಸ್ಸಿಯವರು ಕಳುಹಿಸಿದ ಲಿಸ್ಟ್‌ನಲ್ಲಿ ಯಾರನ್ನು ವಜಾ ಮಾಡಿದ್ದಾರೆ, ಅಂಥವರನ್ನು ಆರೋಗ್ಯ ಇಲಾಖೆಯಲ್ಲಿ ರೆಕ್ರೂಟ್‌ಮೆಂಟ್ ಕಮಿಟಿಯನ್ನು ಪುನಃ ಹೊಸದಾಗಿ ಮಾಡಿಕೊಂಡಿದ್ದೀರಿ; ಅದರ ಮೂಲಕ ನೇಮಕ ಮಾಡಿಸುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ರಿಕ್ರೂಟ್‌ಮೆಂಟ್ ಕಮಿಟಿ ಕ್ಲಾಸ್ ೩ಕ್ಕೆ ಹೊರತು ಕ್ಲಾಸ್ ೨ಕ್ಕೆ ಬರುವುದಿಲ್ಲ. ಪಿಎಸ್‌ಸಿ ರಾಜ್ಯಾಂಗದತ್ತವಾಗಿರತಕ್ಕ ಒಂದು ಸಂಸ್ಥೆ. ಆವರು ಅನ್ಯಾಯ ಮಾಡಿದ್ದಾರೆಂದು ಜನ ಹೇಳುತ್ತಾರೆ. ಯಾವುದು ನ್ಯಾಯವೋ. ಯಾವುದು ಅನ್ಯಾಯವೋ ಪರಮಾತ್ಮನಿಗೆ ಗೊತ್ತು.

ಶ್ರೀ ಕೆ.ಆರ್. ಶ್ರೀನಿವಾಸುಲು ನಾಯ್ಡು :—ಪಿಎಸ್‌ಸಿಗೆ ಹೋದ ಕ್ಯಾಂಡಿಡೇಟ್ಸ್ ಎಷ್ಟು? ಎಷ್ಟು ಜನಕ್ಕೆ ಕೆಲಸಕೊಟ್ಟಿದ್ದಾರೆ, ಎಷ್ಟು ಸ್ಥಳ ಖಾಲಿ ಇದೆ ಎಂದು ವಿವರ ಹೇಳುತ್ತೀರಾ?

ಶ್ರೀ ಎಸ್. ಸಿದ್ದವೀರಪ್ಪ :—ಪಿಎಸ್‌ಸಿ ಮುಂದೆ ಕಳುಹಿಸಿದ್ದರಲ್ಲಿ ೪೩೨ ಜನರನ್ನು ಸೆಲೆಕ್ಟ್ ಮಾಡಿದ್ದಾರೆ ಅವರ ಪೈಕಿ ೧೫೦ ಜನ ಲೋಕಲ್ ಕ್ಯಾಂಡಿಡೇಟ್ಸ್‌ನ್ನು ಸೆಲೆಕ್ಟ್ ಮಾಡಿಕೊಂಡಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ :—ತಮ್ಮ ಹತ್ತಿರ ಇದ್ದ ಲೋಕಲ್ ಕ್ಯಾಂಡಿಡೇಟ್ಸ್ ಎಷ್ಟು ಜನ?

ಶ್ರೀ ಎಚ್. ಸಿದ್ದವೀರಪ್ಪ :—ಪಿಎಸ್‌ಸಿ ಲಿಸ್ಟನ್ನು ನಾವು ಅಪ್ರೂವ್ ಮಾಡಿಲ್ಲ. ಅದಕ್ಕೆಲ್ಲಾ ಶಾಸ್ತ್ರ ಆಗಬೇಕು, ಪೋಲೀಸ್ ರಿಪೋರ್ಟ್ ಅವರ ಮುಂದೆ ಹೋಗಿದೆ. ೨೯೪ ಜನ ಲೋಕಲ್ ಕ್ಯಾಂಡಿಡೇಟ್ಸ್ ಇನ್ನೂ ಹಾಲಿ ಕೆಲಸ ಮಾಡುತ್ತಾ ಇದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಕಡೆಗೆ ಅವರನ್ನು ಎಲ್ಲಿಗೆ ಕಳುಹಿಸುತ್ತೀರಿ?

ಶ್ರೀ ಎಚ್. ಸಿದ್ದವೀರಪ್ಪ.—ನಾವು ಅವರನ್ನು ಡಾಕ್ಟರ್ ಆದ ಕೂಡಲೆ ನೌಕರಿ ಕೊಡುತ್ತೇವೆಂದು ಹೇಳಿಲ್ಲ, ಕೊಡಬೇಕೆಂದು ಯಾವ ಕಾನೂನು ಇಲ್ಲ. ಅವರು ಹಳ್ಳಿಗಳಿಗೆ ಹೋಗುವುದಾದರೆ ನಿಮಗೆ ೫ ಸಾವಿರ ರೂ. ಮುಂಪತ್ತಾಗಿ ಕೊಡುತ್ತೇವೆ ೨ ವರ್ಷಗಳ ಕಾಲಕ್ಕೆ ಬೇಕಾದಂತಹ ಮೆಡಿಸಿನ್ಸ್ ತೆಗೆದು ಕೊಂಡು ಪ್ರಾಕ್ಟೀಸ್ ಮಾಡಿರಿ, ಹಳ್ಳಿಗಳಿಗೆ ಹೋಗಿ ಎಂದರೆ ಅವರು ಯಾರೂ ಒಪ್ಪಿಕೊಂಡಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಲೋಕಲ್ ಕ್ಯಾಂಡಿಡೇಟ್ಸ್‌ನ್ನು ಏಕೆ ತಗೆದುಕೊಳ್ಳಬೇಕಾಗಿತ್ತು?

ಶ್ರೀ ಎಚ್. ಸಿದ್ದವೀರಪ್ಪ :—ಆಗ ೭೦೦–೮೦೦ ಕೆಲಸ ಖಾಲಿ ಇತ್ತು.

ಶ್ರೀ ಕಾಗೋಡು ತಿಮ್ಮಪ್ಪ.—ಪಿಎಸ್‌ಸಿ ಅವರು ರೆಕ್ರೂಟ್‌ಮೆಂಟ್ ಮಾಡಿಕೊಳಬೇಕಾಗಿತ್ತು.

ಶ್ರೀ ಎಂ.ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ಸದಸ್ಯರು ಬಹಳ ಕನಿಕರದಿಂದ ರೆಗ್ಯುಲರೈಸ್ ಮಾಡಿ ಎಂದು ಹೇಳುತ್ತಾ ಇದ್ದಾರೆ. ಕ್ಲಾಸಿಫಿಕೇಶನ್ ಆಫ್ ವೇಕನ್ಸಿ ಮಾಡಿದುದು ಗಾಳಿ ಗೋಪುರವಾಗುವುದಿಲ್ಲವೇ ಹೇಳಿ?

(ಉತ್ತರವಿಲ್ಲ)

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮುಂಖ್ಯಮಂತ್ರಿಗಳು ಇದ್ದಾರೆ ಅವರೂ ಮತ್ತು ಮಾನ್ಯ ಮಂತ್ರಿಗಳೂ ಈ ಡಾಕ್ಟರುಗಳ ನೆರವಿಗೆ ಬರಬೇಕು.

ಶ್ರೀ ಡಿ. ದೇವರಾಜ ಅರಸ್.—ಎರಡೂ ಕಡೆ ತೂಕ ಹಾಕಬೇಕಾಗಿದೆ. ಲೋಕಲ್ ಕ್ಯಾಂಡಿಡೇಟ್ಸನ್ನು ತೆಗೆದುಕೊಂಡರೆ ಪರ್ಮನೆಂಟ್ ಮಾಡಿ ಎನ್ನುವುದಾದರೆ ಪರ್ಮನೆಂಟ್ ಮಾಡಿಕೊಂಡು ಹೋಗೋಣ, ಪಿಎಸ್ಸಿಯೂ ಬೇಡ, ಏನೂ ಬೇಡ ಬೇಕಾದವರನ್ನು ಅಪಾಯಿಂಟ್ ಮಾಡಿಕೊಂಡು ಹೋಗೋಣ. ಇದು ಒಂದೇ ಡಿಫಾರ್ಟ್‌ಮೆಂಟ್ ಏತಕ್ಕೆ ಇದೇ ಸದನದಲ್ಲಿ ಲೋಕಲ್ ಕ್ಯಾಂಡಿಡೇಟ್ಸ್ ಪಿಎಸ್‌ಸಿ ಸೆಲೆಕ್ಷನ್‌ಗೆ ಹೋದಾಗ ಅವರಿಗೆ ಬೇಕಾದಷ್ಟು ಸಹಾಯ ಮಾಡಿದ್ದೇವೆ, ವಯೋಮಿತಿ ಮೇಲೆ ಇದ್ದ ಪ್ರತಿಬಂಧಕ ತೆಗೆದು ಹಾಕಿದ್ದೇವೆ. ೩೫ ವರ್ಷ ಆದವರಿಗೆ ಪಿಎಸ್‌ಸಿಗೆ ಹೋಗಿ take your chance ಎಂದು ಹೇಳಿದವು. It is a big concession given to them. ಆಗ ಯಾರು ಸೆಲೆಕ್ಟ್ ಆದರು, ಯಾರು ಬಿಟ್ಟರು, ನಮ್ಮ ಜವಾಬ್ದಾರಿ ಇಲ್ಲ. ಅವರಿಗೆ ಕೆಲಸ ಕೊಡಿ ಎಂದು ಹೇಳಿದರೆ ಏನೊಂದು ಸೆಕ್ಷನ್ ರಿಸರ್ವೇಷನ್ ಆಗ ಬೇಕು, ಬ್ಯಾಕ್‌ವರ್ಡ್ ಕ್ಲಾಸಸ್ ಏನು ಆಗಬೇಕು ಎಂದು ಕೇಳುತ್ತಾರೆ. ಈ ಪ್ರಶ್ನೆ ಬರುತ್ತದೆ.

SRI D. DEVARAJ URS.—Therefore the hon. member will kindly agree that this is a question where their sympathies cannot be in wrong quarters permanently because something has happened. The practice of taking in local condidates is going on any Government. Sometimes there will be occasions when we have to take local condidates into service temporarily, ಯಾರಿಗೆ ಸಿಂಪತಿ ಮಾಡುತ್ತೀರಿ ? ಹೊಸದಾಗಿ ಓದಿಕೊಂಡು ಬಂದವನಿಗೆ ಸಿಂಪತಿ ಮಾಡುತ್ತೀರೋ ? ಬ್ಯಾಕ್‌ವರ್ಡ್ ಕ್ಲಾಸಸ್‌ಗೆ ಮತ್ತು ಷೆಡ್ಯೂಲ್ ಕ್ಯಾಸ್ಟಿಗೆ ರಿಸರ್ವೇಷನ್ ಹೋದರೆ, ಅವರಿಗೆ ಏನು ಮಾಡುತ್ತೀರಿ ? Let us be very clear in this matter.

Krishi Shala at Ramakrishnapura

703. SRI M. B. RAMASWAMY (Anekal).—Will the Minister for Agriculture and Animal Husbandry be pleased to state.—

(*a*) the extant of land of Krishi Shala at Ramakrishnapura (Dry Bagayat and Wet Lands);

(*b*) the total amount provided by Agriculture Department for improving the production in the said land ;